# ಸ್ವಾಮಿ ಸ್ವಪ್ರಕಾಶಾನಂದ (೧೮೯೦-೧೯೮೩)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**



ಸ್ವಾಮಿ ಸ್ವಪ್ರಕಾಶಾನಂದಜಿ (ಸುರೇಂದ್ರ ಮಹಾರಾಜರು, 'ಸುರೇನ್' ಎಂದೂ ಕರೆಯುತ್ತಿದ್ದರು) ಯವರನ್ನು ನಾನು ಕಂಡದ್ದು ೧೯೭೭ರ ಅಕ್ಟೋಬರ್ ೨ರಂದು. ತಪಸ್ವಿಗಳಾಗಿದ್ದ ಅವರು ಕಾಶಿ ಸೇವಾಶ್ರಮದ ೧೦ನೆ ನಂಬರದ ವಾರ್ಡ್‌ನಲ್ಲಿದ್ದರು. ಸ್ವಾಮಿ ಬ್ರಹ್ಮಾನಂದರ ಶಿಷ್ಯರಾಗಿದ್ದ ಅವರು ತಮ್ಮ ಜೀವನದ ಅಧಿಕಾಂಶವನ್ನು ತಪಸ್ಸು ಹಾಗೂ ಶಾಸ್ತ್ರಚರ್ಚೆಯಲ್ಲಿ ಕಳೆದಿರುವರು. ನೋಡಲು ದುರ್ಬಲರಾಗಿದ್ದರೂ ಸದಾ ಹಸನ್ಮುಖಿ!

ಸುರೇನ್ ಮಹಾರಾಜರ ಬಳಿ ನಾನು ಅನೇಕ ಪ್ರಶ್ನೆಗಳನ್ನು ಕೇಳಿದ್ದೆ. ಅವರು ಅವುಗಳಿಗೆಲ್ಲ ಉತ್ತರವಿತ್ತಿದ್ದರು.

**ಪ್ರಶ್ನೆ:** ಸಾಧನೆ-ಭಜನೆಗಳ ಸಂಬಂಧವಾಗಿ ರಾಜಾ ಮಹಾರಾಜರು (ಸ್ವಾಮಿ ಬ್ರಹ್ಮಾನಂದರು) ಏನು ಹೇಳುತ್ತಿದ್ದರು?

**ಉತ್ತರ:** ''ಜಪ ಮಾಡುತ್ತಾ ಹೋಗು. ಜಪದಿಂದಲೆ ಭಗವಂತನನ್ನು ಪಡೆಯಬಹುದು'' ಎಂದು ಮಹಾರಾಜರು ಹೇಳುತ್ತಿದ್ದರು.

**ಪ್ರಶ್ನೆ:** ಯಾವ ರೀತಿಯ ಜಪ ಪ್ರಶಸ್ತವಾದುದು?- 'ಮಾನಸ' ಜಪವೋ ಅಥವಾ 'ಉಪಾಂಶು' ಜಪವೊ? (ಕೇವಲ ತುಟಿಗಳನ್ನಾಡಿಸುತ್ತ ಮಾಡುವ ಜಪ).

**ಉತ್ತರ:** ಮೊದಮೊದಲು ಮಾನಸ ಜಪ ಕಷ್ಟವೆನಿಸುತ್ತದೆ. ಉಪಾಂಶು ಜಪ ಒಳ್ಳೆಯದು. ಅಭ್ಯಾಸ ಮಾಡುತ್ತಿದ್ದಂತೆ ಕ್ರಮಶಃ ಮಾನಸ ಜಪವಾಗುತ್ತದೆ.

**ಪ್ರಶ್ನೆ:** ಜಪದ ಆಸ್ವಾದನೆಯನ್ನು ಪಡೆಯುವುದು ಹೇಗೆ?

**ಉತ್ತರ:** ಅಭ್ಯಾಸದಿಂದ. ಇಷ್ಟದೇವರಲ್ಲಿ ಆಸಕ್ತರಾದರೆ ಜಪ ರುಚಿಸುತ್ತದೆ. ಜಪವು ಆಂತರಿಕವಾಗಿರಬೇಕು. ಜಪಧ್ಯಾನಗಳನ್ನೆಂದೂ ಬಿಡಬಾರದು.

**ಪ್ರಶ್ನೆ:** ನೀವೀಗ ಯಾವ ರೀತಿಯ ಜಪವನ್ನು ಅನುಸರಿಸುತ್ತೀರಿ?

**ಉತ್ತರ:** ಮಾನಸ ಜಪವನ್ನು ಮಾಡುತ್ತೇನೆ.

**ಪ್ರಶ್ನೆ:** ಭಗವಂತನ ಸ್ಮರಣ-ಮನನವು ಸದಾ ಸಾಧ್ಯವಾಗುವುದೆ?

**ಉತ್ತರ:** ಹ್ಞಂ, ಹೆಚ್ಚಿನ ಸಮಯ ಭಗವಂತನ ಸ್ಮರಣೆಯನ್ನು ಮಾಡುತ್ತೇನೆ. ಕೆಲವೊಮ್ಮೆ, ಅನಾರೋಗ್ಯದಿಂದಾಗಿ ಮರೆತು ಬಿಡುತ್ತೇನೆ.

**ಪ್ರಶ್ನೆ:** ನೀವು ಹರಿ ಮಹಾರಾಜರೊಂದಿಗೆ ಬಹಳ ಕಾಲ ಇದ್ದಿರಿ. ಅವರ ಬಗ್ಗೆ ಸ್ವಲ್ಪ ಹೇಳಿ.

**ಉತ್ತರ:** ಅವರು ಆಧ್ಯಾತ್ಮಿಕ ಜಗತ್ತಿನಲ್ಲಿ ಮಗ್ನರಾಗಿರುತ್ತಿದ್ದರು. ಜಪಧ್ಯಾನ ಮಾಡಲು ಹೇಳುತ್ತಿದ್ದರು. ಜಪಧ್ಯಾನಗಳನ್ನು ಮಾಡದಿದ್ದರೆ ವೃದ್ಧಾಪ್ಯದಲ್ಲಿ ಹೇಗೆ ತಾನೆ ಸಮಯವನ್ನು ಕಳೆಯುವೆ? ನಿನಗೊಂದು ಘಟನೆಯನ್ನು ಹೇಳುವೆ, ಕೇಳು. ಒಂದು ದಿನ ಹರಿ ಮಹಾರಾಜರೊಂದಿಗೆ ಕಂಖಲ್‌ನಿಂದ ಬ್ರಹ್ಮಕುಂಡಕ್ಕೆ ತಿರುಗಾಡಲು ಹೋದೆ. ದಾರಿ ಬದಿಯ ಅಂಗಡಿಯೊಂದರಲ್ಲಿ ಜಿಲೇಬಿ ಕರಿಯುತ್ತಿದ್ದರು. ಅದನ್ನು ನೋಡಿದ ಮಹಾರಾಜರು ಅಲ್ಲೆ ನಿಂತುಬಿಟ್ಟರು. ಬಳಿಕ ಜೋರಾಗಿ ಹೇಳಿದರು, ''ಸುರೇನ್, ಜಿಲೇಬಿ ನಮ್ಮ ಆದರ್ಶ. ಜಿಲೇಬಿ ನಮ್ಮ ಆದರ್ಶ! ನೋಡು, ಈತ ಜಿಲೇಬಿಯನ್ನು ತುಪ್ಪದಲ್ಲಿ ಕರಿದು ಸಕ್ಕರೆ ಪಾಕದಲ್ಲಿ ಹಾಕುತ್ತಿದ್ದಾನೆ. 'ಜ್ಞಾನವನ್ನು ವೈರಾಗ್ಯದಲ್ಲಿ ಕರಿದು ಭಕ್ತಿಯಲ್ಲಿ ಅದ್ದಿಡಬೇಕು.' ಇದರ ಅಭ್ಯಾಸವನ್ನು ಠಾಕೂರರು ತಮ್ಮ ಸ್ವಂತ ಜೀವನದಲ್ಲಿ ನಮಗೆ ತೋರಿಸಿ ಹೋಗಿದ್ದಾರೆ.''

ಈ ಪ್ರಾಚೀನ ತಪಸ್ವಿ ಸಾಧುಗಳು ರಾಮಕೃಷ್ಣ ಸಂಘದ ಆಧ್ಯಾತ್ಮಿಕ ಧಾರೆಯನ್ನು ಎತ್ತಿ ಹಿಡಿದಿದ್ದರು. ಈಗ ಅವರಾರೂ ನಮ್ಮೊಂದಿಗಿಲ್ಲ. ಆದ್ದರಿಂದಲೇ ಅವರ ಸ್ಮೃತಿಗಳು ನಮ್ಮೆಲ್ಲರ

ಅತ್ಯಮೂಲ್ಯ ಸಂಪತ್ತು. ಸ್ವಾಮಿ ಬ್ರಹ್ಮಾನಂದರ ಶಿಷ್ಯರಾಗಿದ್ದ ಸ್ವಾಮಿ ಪವಿತ್ರಾನಂದರು ಸುರೇಂದ್ರ ಮಹಾರಾಜರನ್ನು ಅವರು ದೀಕ್ಷೆ ಪಡೆದ ವಿಷಯವಾಗಿ ಕೇಳಿದಾಗ ಅವರು ಈ ರೀತಿ ಉತ್ತರಿಸಿದ್ದರು:

''ಪ್ರೀತಿಯ ಪವಿತ್ರಾನಂದಜೀ,

....ನೀವು ತಿಳಿದುಕೊಳ್ಳಬಯಸಿದ ವಿಷಯದ ಬಗ್ಗೆ ಸ್ವಲ್ಪ ಬರೆಯುತ್ತಿದ್ದೇನೆ. ನನ್ನ ದೀಕ್ಷೆಯ ದಿನ ಇಬ್ಬರು ದೀಕ್ಷಾರ್ಥಿಗಳಿದ್ದೆವು - ನಾನು ಹಾಗೂ ಮತ್ತೊಬ್ಬ ಸಾಧುಗಳು. ಆಗಿನ ದಿನಗಳಲ್ಲಿ ಠಾಕೂರರ ಗೃಹದ ಹಿಂದಿನ ಧ್ಯಾನಮಂದಿರದಲ್ಲಿ ದೀಕ್ಷೆ ನಡೆಯುತ್ತಿತ್ತು. ದೀಕ್ಷೆಗೆ ಮುಂಚೆ ರಾಜಾ ಮಹಾರಾಜರು ಸುಮಾರು ಅರ್ಧಗಂಟೆಯ ಕಾಲ ಪೂಜೆ ಮಾಡುತ್ತಿದ್ದರು. ನಾವು ದೀಕ್ಷೆ ಪಡೆದಂದು ಕೂಡ ಅವರು ಧ್ಯಾನಮಂದಿರವನ್ನು ಪ್ರವೇಶಿಸಿ ಪೂಜೆ ಮಾಡಿದರು. ನಾವು ಇಬ್ಬರೂ ಧ್ಯಾನಮಂದಿರದ ಹೊರಗೆ ಬಾಗಿಲಿನೆದರು ಕಾಯುತ್ತಿದ್ದೆವು. ಪೂಜೆ ಮುಗಿದಾಗ ಮಹಾರಾಜರು ಮೊದಲು ಸಂನ್ಯಾಸಿಗಳನ್ನು ಕರೆದರು. ನಾನು ಪ್ರವೇಶಿಸುತ್ತಲೇ ನಿರ್ದಿಷ್ಟ ಆಸನದಲ್ಲಿ ಕುಳಿತೆ. ಮೊದಲು ಶ್ರೀ ಮಹಾರಾಜರು ನನ್ನ ಕೈಗೆ ಹೂಗಳನ್ನು ಕೊಟ್ಟು ಪೂಜಾಕಲಶಕ್ಕೆ ಅವುಗಳನ್ನರ್ಪಿಸಲು ಹೇಳಿದರು. ನಾನು ಪುಷ್ಪಾಂಜಲಿಯನ್ನು ನೀಡಿದೆ.

ರಾಜಾ ಮಹಾರಾಜರು ತುಟಿಗಳನ್ನು ಅಲುಗಿಸುತ್ತಾ ಉಚ್ಚರಿಸಿದ ಮಂತ್ರಗಳು ನನಗೆ ತಿಳಿಯಲಿಲ್ಲ. ಆನಂತರ ದೀಕ್ಷಾ ಮಂತ್ರವನ್ನು ಪ್ರದಾನ ಮಾಡಿದರು. ಕರಜಪ ಮಾಡುವ ಬಗೆಯನ್ನೂ ತೋರಿಸಿಕೊಟ್ಟರು. ದಿನಾ ನಿರ್ದಿಷ್ಟ ಸಂಖ್ಯೆಯ ಜಪವನ್ನು ಮಾಡಬೇಕೆಂದು ಹೇಳುತ್ತ, ''ಪ್ರತಿದಿನವೂ ನಿತ್ಯಜಪವನ್ನು ಮಾಡು; ಜಪವನ್ನೆಂದೂ ಬಿಡಬೇಡ. ಜಪದ ಸಂಖ್ಯೆ ಹೆಚ್ಚಿದಷ್ಟು ಒಳ್ಳೆಯದು. ಕಾಶಿಯಿಂದ ೧೦೮ ಮಣಿಗಳಿರುವ ಜಪಮಾಲೆಯನ್ನು ತರಿಸಿಕೊ'' ಎಂದರು. ಮುಂದುವರಿಸುತ್ತ, ''ಒಂದು ವರ್ಷ ಕಾಲ ಪ್ರತಿ ಸೋಮವಾರದಂದು ಶಿವನ ದೇವಸ್ಥಾನಕ್ಕೆ ಹೋಗಿ ಪುಷ್ಪ, ಬಿಲ್ವಪತ್ರೆಗಳಿಂದ ಶಿವನನ್ನು ಪೂಜಿಸು. ಆ ದಿನ ಹವಿಷ್ಯಾನ್ನದ ಭೋಜನವನ್ನು ಸೇವಿಸು. ರಾತ್ರಿ ಸ್ವಲ್ಪ ಹಾಲು ಇಲ್ಲವೆ ಫಲ-ಸಿಹಿತಿಂಡಿಯನ್ನು ತೆಗೆದುಕೊ. ಪೂಜಾವಿಧಿಯನ್ನು ಯಾರಿಂದಲಾದರೂ ಕಲಿತುಕೊ'' ಎಂದರು.

ತದನಂತರ ಹೇಳಿದರು, ''ಜಪ ಮಾಡುವಾಗ ಹೃದಯದಲ್ಲಿ ಜ್ಯೋತಿರ್ಮಯ ಇಷ್ಟಮೂರ್ತಿಯನ್ನು ಭಾವಿಸಬೇಕು. ಬಳಿಕ ಜಪವನ್ನು ಮಾಡದೆ ಬರಿಯ ಇಷ್ಟಮೂರ್ತಿಯನ್ನು ಧ್ಯಾನಿಸಲು ಪ್ರಯತ್ನಿಸು. ಇಷ್ಟಮೂರ್ತಿಯ ಮುಖ ನಿನ್ನ ಬೆನ್ನು ಎದುರಿಸುವಂತೆ* ಹೃದಯಮಾರ್ಗದಲ್ಲಿ ಇಷ್ಟಮೂರ್ತಿಯನ್ನಿರಿಸಿಕೊ. ಇಷ್ಟಮೂರ್ತಿಯ ಬೆನ್ನು ಮುಂದಿರಬೇಕು. ಈ ರೀತಿ ಜ್ಯೋತಿರ್ಮಯ ಇಷ್ಟಮೂರ್ತಿಯನ್ನು ಹೃದಯದಲ್ಲಿ ಕುಳ್ಳಿರಿಸಿ ಧ್ಯಾನ ಮಾಡು. ಧ್ಯಾನ ಸರಿಯಾದರೆ ಕಡೆಗೆ ಇಷ್ಟಮೂರ್ತಿಯೂ ಉಳಿಯುವುದಿಲ್ಲ; ಜ್ಯೋತಿ ಮಾತ್ರವೇ ಉಳಿಯುತ್ತದೆ, ಅದರಲ್ಲೇ ನಿನ್ನ ಮನಸ್ಸು ಲಯವಾಗುವಾಗುವುದು.''

ಅನಂತರ ಮಹಾರಾಜರು ಹೇಳಿದರು, ''ಈ ಹಣ್ಣನ್ನು ನನ್ನ ಕೈಗೆ ಕೊಡು.'' (ದಕ್ಷಿಣೆಯನ್ನು ಮೊದಲೆ ಸಲ್ಲಿಸಲಾಗಿದ್ದು, ಹಣ್ಣು ಉಳಿದಿತ್ತು) ನಾನು ಶ್ರೀ ಮಹಾರಾಜರಿಗೆ ಹಣ್ಣನ್ನು ಕೊಟ್ಟು ಅವರಿಗೆ ಪ್ರಣಾಮ ಮಾಡಿದೆ. ಶ್ರೀ ಮಹಾರಾಜರು ಆಸನದಿಂದೆದ್ದು ಹೊರಗೆ ಹೋದರು. ನಾನೂ ಶ್ರೀ ಮಹಾರಾಜರನ್ನು ಕೇಳಿದ್ದೆ, ''ಹೃದಯ ಮಧ್ಯದಲ್ಲಿ ಜ್ಯೋತಿರ್ಮಯ ಇಷ್ಟಮೂರ್ತಿಯನ್ನು ಹೇಗೆ ಧ್ಯಾನಿಸುವುದು?'' ಎಂದು. ಶ್ರೀ ಮಹಾರಾಜರು, ''ನಿನ್ನ ಇಷ್ಟದೇವರ ಧ್ಯಾನವನ್ನು ಮಾಡುವೆಯಲ್ಲ, ಆ ಧ್ಯಾನದಲ್ಲಿ ರೂಪದ ಬಗ್ಗೆ ಹೇಳಿರುವಂತೆಯೆ ಧ್ಯಾನ ಮಾಡು,'' ಎಂದು ಹೇಳಿ ಶ್ರೀ ಮಹಾರಾಜರು ಒಂದು ಧ್ಯಾನ ಪ್ರಣಾಲಿಯನ್ನು ಹೇಳಿಕೊಟ್ಟಿದ್ದರು.

ನನ್ನ ಆಂತರಿಕ ಸ್ನೇಹ-ಪ್ರೀತಿಗಳನ್ನು ಸ್ವೀಕರಿಸಿ.

ಇತಿ ನಿಮ್ಮೆಲ್ಲರ

ಸ್ವಪ್ರಕಾಶಾನಂದ''

**ಕಾಶಿ ಸೇವಾಶ್ರಮ, ೧೧ನೆ ನಂ. ವಾರ್ಡ್, ೨ ಅಕ್ಟೋಬರ್ ೧೯೭೭, ಸಂಜೆ ೪.೩೦**

ಸ್ವಾಮಿ ಸ್ವಪ್ರಕಾಶಾನಂದಜಿಯವರ ಮಾತುಗಳನ್ನು ಟೇಪ್ ಮಾಡಿಕೊಂಡೆ. ಈ ಟೇಪ್‌ನಿಂದ ಅವರ ಸ್ಮೃತಿಕತೆಯನ್ನು ಉಲ್ಲೇಖಿಸಲಾಗಿದೆ :

ರಾಜಾ ಮಹಾರಾಜರು ಒಂದೆಡೆ ಗುರುಗಾಂಭೀರ್ಯದಿಂದ ಅಧ್ಯಾತ್ಮ ಭಾವದಲ್ಲಿ ಮುಳುಗಿದ್ದರೂ ಕೆಲವೊಮ್ಮೆ ಬಾಲಕನಂತೆ ಹಾಸ್ಯ, ತಮಾಷೆ ಮಾಡುತ್ತ ನಲಿಯುತ್ತಿದ್ದರು. ಆಗ ಅವರ ಮಾತುಗಳನ್ನು ಕೇಳಿದವರಿಗೆ ನಗುವನ್ನು ತಡೆಯಲಾಗುತ್ತಿರಲಿಲ್ಲ.

ನಾನು ಕಂಖಲ್‌ನಲ್ಲಿ ಮಠವನ್ನು ಸೇರಿದೆ. ಯಾರೆಂದರೆ ಅವರಿಂದ ದೀಕ್ಷೆಯನ್ನು ಪಡೆಯುವುದಿಲ್ಲವೆಂದುಕೊಂಡಿದ್ದೆ. ಒಂದು ದಿನ ನಾನು ಮಹಾರಾಜರ ಬಳಿಸಾರಿ ದೀಕ್ಷೆಗಾಗಿ ಪ್ರಾರ್ಥಿಸಿದೆ. ಅವರು -'ನಂತರ' ಎಂದರು. ೫ ವರ್ಷಗಳ ಬಳಿಕ ದೀಕ್ಷೆಯನ್ನು ಪಡೆದು, ಮದ್ರಾಸು ಮಠಕ್ಕೆ ಹೋಗಿ ಅಲ್ಲಿ ಕಾರ್ಯಕರ್ತನಾದೆ.

---

* ಎರಡು ರೀತಿಗಳಲ್ಲಿ ನಾವು ಇಷ್ಟದೇವರನ್ನು ಹೃದಯದಲ್ಲಿ ಸ್ಥಾಪಿಸಬಹುದು. ೧) ಸಾಮಾನ್ಯವಾಗಿ ಸಾಧಕನು ತನ್ನ ದೇಹವೆಂಬ ಮಂದಿರದಲ್ಲಿ ಭಗವಂತನನ್ನು ಸ್ಥಾಪಿಸುವನು. ಇಷ್ಟದೇವರ ಮುಖ ಹಾಗೂ ಸಾಧಕನ ಮುಖ ಒಂದೇ ದಿಕ್ಕಿನಲ್ಲಿರುವುದು. ಸಾಧಕನ ಜೀವಾತ್ಮವು ದೇಹದಿಂದ ಹೊರಬಂದು ಮುಖಾಮುಖಿಯಾಗಿ ಇಷ್ಟದೇವರ ಧ್ಯಾನ ಮಾಡುವುದು. ಮನುಷ್ಯನ ಮನಸ್ಸಿಗೆ ಎಲ್ಲವೂ ಸಾಧ್ಯ. ೨) ಈ ಪತ್ರದಲ್ಲಿ ಬರೆದಿರುವಂತೆ ಸಾಧಕನು ದೇಹದಿಂದ ಹೊರಬರದೆ, ಹೃದಯದಲ್ಲಿ ಕುಳಿತು ಮುಖಾಮುಖಿಯಾಗಿ ಇಷ್ಟದೇವರ ಧ್ಯಾನ ಮಾಡುವುದು.

೧೯೨೧ರಲ್ಲಿ ಶ್ರೀ ಮಹಾರಾಜರು, ಮಹಾಪುರುಷಜೀ, ರಾಮಲಾಲ ದಾದಾ ಮದ್ರಾಸಿಗೆ ಬಂದರು. ಅಕ್ಟೋಬರ್ ತಿಂಗಳಿನಲ್ಲಿ ದುರ್ಗಾಮೂರ್ತಿಯ ಪೂಜೆಯನ್ನು ಆಯೋಜಿಸಲಾಯಿತು. ಆಗ ನಾನು ಶ್ರೀಮಹಾರಾಜರಿಗೆ ಬೇಕಾದ ಸಾಮಗ್ರಿಗಳನ್ನು ಸಾಧ್ಯವಾದಷ್ಟು ತಂದುಕೊಡುತ್ತಿದ್ದೆ. ಮಹಾರಾಜರು ಮದ್ರಾಸಿನಲ್ಲಿ ಸ್ವಾಮಿ ಪ್ರಭವಾನಂದ, ಸ್ವಾಮಿ ಅಶೋಕಾನಂದ ಹಾಗೂ ನನಗೆ ಸಂನ್ಯಾಸ ದೀಕ್ಷೆಯನ್ನು ನೀಡಿದರು.

ಕಂಖಲ್‌ನಲ್ಲಿ ಹರಿ ಮಹಾರಾಜರ ಸಂಪರ್ಕದಿಂದ ನನ್ನ ಜೀವನವೇ ಬದಲಾಯಿತು. 'ವಿವೇಕಚೂಡಾಮಣಿ'ಯ ಶ್ಲೋಕಗಳನ್ನು ವಿವರಿಸುವಾಗ ಅವರಾಡುತ್ತಿದ್ದ ತ್ಯಾಗ-ವಿವೇಕದ ನುಡಿಗಳು ನಮ್ಮ ಮೇಲೆ ಅಪಾರ ಪ್ರಭಾವವನ್ನು ಬೀರುತ್ತಿದ್ದವು. ಒಂದು ದಿನ ಸ್ವಾಮಿ ಪ್ರಜ್ಞಾನಂದರು ಕ್ಲಾಸ್‌ನಲ್ಲಿ ಉಪಸ್ಥಿತರಿದ್ದರು. ಹರಿ ಮಹಾರಾಜರೆಂದರು, 'ಬರಿಯ ಕೇಳಿದರೆ ಸಾಲದು, ಸ್ವಂತ ಜೀವನದಲ್ಲಿ ಅನುಭವಕ್ಕೆ ತರಬೇಕು.' ಇದನ್ನು ಕೇಳಿದ ಪ್ರಜ್ಞಾನಂದಜೀ ಕೋಣೆಗೆ ಹೋಗಿ ಧ್ಯಾನ ಮಾಡಲಾರಂಭಿಸಿದರು. ಹರಿ ಮಹಾರಾಜರ ತರಗತಿಗಳ ವಿಶೇಷತೆಯೆಂದರೆ, ಶಾಸ್ತ್ರಗಳ ಮರ್ಮಾರ್ಥವನ್ನು ನಮ್ಮೆದುರು ಎತ್ತಿ ಹಿಡಿಯುತ್ತಿದ್ದರು. ೧೯೧೩ರಿಂದ ೧೯೧೮ರ ವರೆಗೆ ನಾನು ಕಂಖಲ್‌ನಲ್ಲಿದ್ದೆ. ನನ್ನ ಜೀವನದಲ್ಲಿ ಆಧ್ಯಾತ್ಮಿಕ ಉನ್ನತಿಯೇನಾದರೂ ಆಗಿದ್ದರೆ, ಅದಕ್ಕೆ ಹರಿ ಮಹಾರಾಜರೇ ಕಾರಣ. ನಾನು ಹರಿ ಮಹಾರಾಜ್ ಮತ್ತು ರಾಜಾ ಮಹಾರಾಜರ ಸ್ಮೃತಿಕಥೆಗಳನ್ನು ಬರೆದಿದ್ದೆ. ಆದರೆ ಅವೆಲ್ಲ ಕಳೆದುಹೋಗಿವೆ.

ಶ್ರೀಮಾತೆಯವರ ದರ್ಶನವನ್ನು ನಾನು 'ಉದ್ಬೋಧನ'ಲ್ಲಿ ಪಡೆದೆ. ಆದರೆ ಅವರೊಂದಿಗೆ ಮಾತನಾಡಿಲ್ಲ. ಶರತ್ ಮಹಾರಾಜರು ಹೇಳಿದ್ದರು – ''ನೀವು ಶ್ರೀಮಾತೆಯವರು ಸಾಮಾನ್ಯರಂತೆ ಈ ಜಗತ್ತಿನಲ್ಲಿ ವ್ಯವಹರಿಸುತ್ತಿರುವುದನ್ನು ನೋಡುತ್ತಿರುವಿರಿ. ಆದರೆ ವಾಸ್ತವದಲ್ಲಿ ಅವರ ಸ್ವರೂಪವೇ ಬೇರೆ. ಅವರು ಮಾಡಿದ ಕಾರ್ಯವೆಲ್ಲ ನಮ್ಮ ಶಿಕ್ಷಣಕ್ಕಾಗಿಯೇ ಆಗಿದ್ದವು. ಅವರ ಯಾವುದೇ ಕೆಲಸದಲ್ಲೂ ಸ್ವಾರ್ಥವಿರುತ್ತಿರಲಿಲ್ಲ. ಶ್ರೀಮಾತೆಯವರು ರಾಧುವನ್ನು ಬೆಳೆಸಿದರು, ಆಕೆಗೆ ಮದುವೆ ಮಾಡಿದರು; ಆದರೆ ಅದೇ ರಾಧು ಅವರಿಗೆ ಅದೆಷ್ಟು ಹಿಂಸೆಯನ್ನಿತ್ತಳು! ಕೊನೆಗೆ ಶ್ರೀಮಾತೆಯವರು ರಾಧುವಿನ ಮೇಲಿದ್ದ ಮಾಯಾಬಂಧನವನ್ನು ಕತ್ತರಿಸುತ್ತ – 'ಇನ್ನು ಮುಂದೆ ನನ್ನ ಹತ್ತಿರ ಬರಬೇಡ' ಎಂದರು.''

ಬೇಲೂರು ಮಠದಲ್ಲಿ ಮಹಾಪುರುಷಜಿಯವರ ಸಾನ್ನಿಧ್ಯವನ್ನು ಬಹಳವಾಗಿ ಪಡೆದಿದ್ದೇನೆ. ನಾನು ಬೇಲೂರು ಮಠದ ಠಾಕೂರ್ ಭಂಡಾರ (ದೇವಾಲಯದ ಅಡುಗೆಮನೆ) ದಲ್ಲಿ ಕೆಲಸ ಮಾಡುತ್ತಿದ್ದಾಗ ಠಾಕೂರರ ನೈವೇದ್ಯದ ನಂತರ ಪ್ರಸಾದವನ್ನು ಮೊದಲು ಮಹಾಪುರುಷಜಿಯವರ ಬಳಿಗೆ ತೆಗೆದುಕೊಂಡು ಹೋಗುತ್ತಿದ್ದೆ. ಒಂದು ದಿನ ಠಾಕೂರರ ಫಲ-ಸಿಹಿತಿಂಡಿ ಪ್ರಸಾದವನ್ನು ತೆಗೆದುಕೊಂಡು ಅವರ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆ ಅವರು ಹೀಗೆ ಹೇಳುತ್ತಿರುವುದನ್ನು ಕೇಳಿದೆ, ''ರಾಜಾ, ಠಾಕೂರರನ್ನು ಈಗಲೂ ನೋಡುತ್ತೇನೆ. ಹಾಗಿಲ್ಲದಿದ್ದರೆ ನನಗೆ ಪ್ರಾಣವನ್ನು ಹಿಡಿದಿಡುವುದೇ ಕಷ್ಟವೆನಿಸುತ್ತಿತ್ತು!''

ಭಕ್ತರು ಮಹಾಪುರುಷಜಿಯವರಿಗಾಗಿ ವಿಧವಿಧವಾದ ವಸ್ತುಗಳನ್ನು ತರುತ್ತಿದ್ದರು. ''ಭಕ್ತರು ತಂದ ವಸ್ತುಗಳ ಅಗ್ರಭಾಗವನ್ನು ಆರಿಸಿ ಮೊದಲು ಠಾಕೂರರಿಗೆ ಕೊಡು. ಇದರ ಬಗ್ಗೆ ನನ್ನನ್ನು ಮತ್ತೇನೂ ಕೇಳಬೇಕಾಗಿಲ್ಲ'' ಎಂದಿದ್ದರು.

ಒಂದು ದಿನ ಆರತಿಯ ಬಳಿಕ ನಾನು ಮಹಾಪುರುಷಜಿಯವರಿಗೆ ಪ್ರಣಾಮ ಮಾಡಲು ಹೋದೆ. ಪ್ರಣಾಮದ ನಂತರ ಹೊರಬರುತ್ತಿದ್ದಂತೆಯೆ ಅವರು ನನ್ನನ್ನು ಕರೆದು ಕೇಳಿದರು – ''ನೀನು ಸ್ವಾಮೀಜಿಯವರ ಕೋಣೆಯಲ್ಲಿ ಪ್ರಣಾಮ ಮಾಡಿದೆಯಾ?'' ನಾನೆಂದೆ, ''ಇಲ್ಲ, ಅಲ್ಲಿ ಪ್ರಣಾಮ ಮಾಡಿಲ್ಲ. ಈಗ ಹೋಗಿ ಮಾಡುವೆ.'' ಅವರೆಂದರು, ''ಮೊದಲು ಅಲ್ಲಿ ಪ್ರಣಾಮ ಮಾಡು. ನಂತರ ಇಲ್ಲಿಗೆ ಬಾ. ಸಾಕ್ಷಾತ್ ಶಿವಸ್ವರೂಪರಾದ ಸ್ವಾಮೀಜಿ ಅಲ್ಲಿರುವರು.'' ಮಹಾಪುರುಷಜಿಯವರ ಈ ಮಾತುಗಳು ನನ್ನ ಮೇಲೆ ಆಳವಾದ ಪ್ರಭಾವವನ್ನು ಬೀರಿದವು.

ಒಂದು ದಿನ ಸ್ನಾನಕ್ಕೆಂದು ಬ್ರಹ್ಮಕುಂಡಕ್ಕೆ ಹೋಗಿದ್ದೆ. ಹಿಂದಿರುಗಿದಾಗ ಮಹಾಪುರುಷಜಿ ವಿಚಾರಿಸಿದರು, ''ಸುರೇನ್, ಎಲ್ಲಿಗೆ ಹೋಗಿದ್ದೆ?'' ''ಮೀಯಲೆಂದು ಬ್ರಹ್ಮಕುಂಡಕ್ಕೆ ಹೋಗಿದ್ದೆ.'' ''ಅದೇಕೆ? ಸ್ನಾನವನ್ನು ಬೇರೆಡೆಯೂ ಮಾಡಬಹುದಿತ್ತಲ್ಲ!'' ''ಇಲ್ಲ ಮಹಾರಾಜ್, ಬ್ರಹ್ಮಕುಂಡ ಅತ್ಯಂತ ಪವಿತ್ರ ಸ್ಥಾನ. ಧರ್ಮಭಾವ ಜಾಗೃತವಾಗುತ್ತದೆಂದು ಅನೇಕರು ಅಲ್ಲಿ ಸ್ನಾನ ಮಾಡುತ್ತಾರೆ.'' ''ನಿನ್ನಲ್ಲಿ ಧರ್ಮಭಾವವು ಜಾಗೃತವಾಗಿದೆಯೆ?'' ''ಇಲ್ಲ ಮಹಾರಾಜ್. ಆದರೆ ಸ್ನಾನ ಮಾಡುವಾಗ ಗಂಗಾಮಾತೆಗೆ ನಮಸ್ಕರಿಸಿದ್ದೇನೆ. ನನ್ನನ್ನು ಪವಿತ್ರಗೊಳಿಸೆಂದು ಪ್ರಾರ್ಥಿಸಿದ್ದೇನೆ. ಕೆಲವು ಶಿವಸ್ತೋತ್ರಗಳನ್ನೂ ಪಠಿಸಿದ್ದೇನೆ.'' ಆಗ ಅಲ್ಲಿದ್ದ ಹರಿ ಮಹಾರಾಜರೆಂದರು, ''ನೋಡು, ನೀನು ಪವಿತ್ರವಾದ ಬ್ರಹ್ಮಕುಂಡದಲ್ಲಿ ಮೀಯುವಾಗ ತತ್ತ್ವಚಿಂತನೆಯನ್ನು ನೆನಪಿಡಬೇಕು. ಅಲ್ಲಿ ಸ್ನಾನ ಮಾಡಲು ಕಾರಣವೇನು? ಪವಿತ್ರವಾಗಲು. ಪವಿತ್ರ ಹೃದಯದಲ್ಲಿ ಆತ್ಮತತ್ತ್ವವು ಜಾಗೃತವಾಗುತ್ತದೆ. ಇತರ ದೇವದೇವಿಯರ ದರ್ಶನ ಮಾಡುವಾಗಲೂ ಆತ್ಮಜ್ಞಾನದ ಲಾಭ ಹಾಗೂ ಭಕ್ತಿಭಾವವನ್ನು ಪ್ರಬಲಗೊಳಿಸುವುದೇ ಉದ್ದೇಶವಾಗಿರಬೇಕು. ಪುಣ್ಯಸ್ಮೃತಿಯನ್ನು ಹೃದಯದಲ್ಲಿ ಸ್ಥಿರಗೊಳಿಸಲೆಂದೇ ಜನರು ತೀರ್ಥದರ್ಶನವನ್ನು ಮಾಡುವರು.'' ಹರಿ ಮಹಾರಾಜರ ಈ ನುಡಿಗಳು ನನ್ನ ಮನಸ್ಸಿನಲ್ಲಿ ಅಪಾರ ಪ್ರಭಾವವನ್ನು ಬೀರಿದವು. ಆ ಬಳಿಕ ಸ್ನಾನ ಮಾಡಲು ಬ್ರಹ್ಮಕುಂಡಕ್ಕೆ ಹೋದಾಗಲೆಲ್ಲ ಹರಿ ಮಹಾರಾಜರ ಮಾತುಗಳು ನೆನಪಿಗೆ ಬರುತ್ತಿದ್ದವು.

ಕೆಲವೊಮ್ಮೆ ಸಂಜೆಯ ಹೊತ್ತಿಗೆ ತಿರುಗಾಡಲೆಂದು ಹರಿ ಮಹಾರಾಜರೊಂದಿಗೆ ಕಂಖಲ್‌ನಿಂದ ಬ್ರಹ್ಮಕುಂಡಕ್ಕೆ ಹೋಗುತ್ತಿದ್ದೆ. ಅವರು ಮೇಲೆ ನಿಂತಿರುತ್ತಿದ್ದರು. ನಾನು ಕೆಳಗಿಳಿದು ಗಂಗೆಯನ್ನು ಸ್ಪರ್ಶಿಸಿ ಕೈಯಲ್ಲಿ ಸ್ವಲ್ಪ ಜಲವನ್ನು ತಂದು ಮಹಾರಾಜರಿಗೆ ಕೊಡುತ್ತಿದ್ದೆ. ಅವರು ಅದನ್ನು ತಮ್ಮ ತಲೆಯ ಮೇಲೆ ಪ್ರೋಕ್ಷಿಸಿಕೊಳ್ಳುತ್ತಿದ್ದರು. ಒಂದು ದಿನ ಹೇಳಿದರು, ''ನೋಡು, 'ಗಂಗೇ ಚ ಯಮುನೇ ಚೈವ' ಎಂದು ಪಠಿಸಿದರೆ ಮಾತ್ರ ಸಾಲದು. ಆ ಪವಿತ್ರಸ್ವರೂಪಿಣಿ, ಪವಿತ್ರಕಾರಿಣಿ ಗಂಗಾಮಾತೆಯನ್ನು ಪವಿತ್ರತೆಗಾಗಿ ಆಂತರಿಕವಾಗಿ ಪ್ರಾರ್ಥಿಸು.''

ಸಾಧನೆ-ಭಜನೆಯ ನಿಜವಾದ ರಹಸ್ಯವಿರುವುದು ಅಭ್ಯಾಸದಲ್ಲಿ. ಬೆಳಿಗ್ಗೆ ಸ್ನಾನಾನಂತರ, ಸಂಜೆ ಹಾಗು ರಾತ್ರಿ ನಿತ್ಯನಿಯಮಿತವಾಗಿ ಜಪಧ್ಯಾನಗಳನ್ನು ಮಾಡುತ್ತಿದ್ದಂತೆ ಅಂತರ್ಜಗತ್ತು ತೆರೆದುಕೊಳ್ಳುತ್ತದೆ, ಆನಂದ ಪ್ರಾಪ್ತಿಯಾಗುತ್ತದೆ. ಠಾಕೂರರ ಪಾರ್ಷದರ ಸಂಗಲಾಭವನ್ನು ಪಡೆದಿರುವೆ, ಅವರ ಉಪದೇಶಗಳನ್ನಾಲಿಸಿರುವೆ. ಆದರೆ ನಿಜವಾಗಿ ಬೇಕಾಗಿರುವುದು ಅಭ್ಯಾಸ. ಉಪದೇಶವನ್ನು ಕಾರ್ಯರೂಪಕ್ಕೆ ತರಬೇಕು.

ನೋಡು, ನಾವು ಸರ್ವವನ್ನೂ ತ್ಯಜಿಸಿ ಸಂನ್ಯಾಸಿಗಳಾಗಿ ಮಹಾವಾಕ್ಯಾದಿ ಸಂನ್ಯಾಸ ಮಂತ್ರವನ್ನು ಪಡೆದಿದ್ದೇವೆ. ಹರಿ ಮಹಾರಾಜರು ಈ ಮಂತ್ರಗಳ ಶ್ರವಣ, ಮನನ ಹಾಗು ನಿದಿಧ್ಯಾಸನಗಳಿಗೆ ಪ್ರಾಧಾನ್ಯತೆಯನ್ನು ನೀಡುತ್ತಿದ್ದರು. ನೋಡು, ಈ ಬಗ್ಗೆ ಒಂದು ಶ್ಲೋಕ ಹೀಗಿದೆ: **ನಿತ್ಯಂ ಕರ್ಮ ಪರಿತ್ಯಜ್ಯ ವೇದಾಂತಃ ಶ್ರವಣಂ ವಿನಾ । ವರ್ತಮಾನಸ್ತು ಸಂನ್ಯಾಸೀ ಪತತ್ಯೇವ ನ ಸಂಶಯಮ್ ॥** 'ನಿತ್ಯಕರ್ಮ' ಎಂದರೆ ಗುರೂಪದೇಶದಂತೆ ಜಪಧ್ಯಾನ ಮಾಡುವುದು; ತದನಂತರ ಶಾಸ್ತ್ರಶ್ರವಣ, ಮನನ, ನಿದಿಧ್ಯಾಸನ. ಸಾಧುಜೀವನವನ್ನು ಪತನಗೊಳ್ಳದಂತೆ ರಕ್ಷಿಸುವುದು ಇವುಗಳೇ.

ನನಗೊಂದು ಸಂದೇಹವಿತ್ತು. ಈ ಸಂದೇಹವು ಅನೇಕರಿಗಿದೆ. ದೀಕ್ಷೆಯ ಸಮಯದಲ್ಲಿ ಇಷ್ಟಮಂತ್ರವನ್ನು ಪಡೆದಿದ್ದು ಈಗ ಸಂನ್ಯಾಸ ಪಡೆದಾಗ ಪ್ರೇಷಮಂತ್ರ ಹಾಗೂ ಮಹಾವಾಕ್ಯವನ್ನು ಪಡೆದಿರುವೆ. ಇವುಗಳಲ್ಲಿ ಯಾವುದನ್ನು ಅಭ್ಯಾಸ ಮಾಡಬೇಕು? ನಾವು ಸಂನ್ಯಾಸಿಗಳಾದ್ದರಿಂದ ಪ್ರೇಷಮಂತ್ರ ಹಾಗೂ ಮಹಾವಾಕ್ಯಗಳನ್ನು ಅಭ್ಯಾಸ ಮಾಡುವುದೇ ಉಚಿತ.

ಈ ಬಗ್ಗೆ ಹರಿ ಮಹಾರಾಜರೊಂದಿಗೆ ಚರ್ಚಿಸಿದಾಗ ಅವರೆಂದರು, ''ನೋಡು, ಸಂಶಯಪಡುವುದು ಮನಸ್ಸಿನ ಸ್ವಭಾವ. ನಮ್ಮ ಜೀವನದ ಉನ್ನತಿಗಾಗಿ ಇಷ್ಟಮಂತ್ರವನ್ನು ಪಡೆದಿರುವೆವು. ಇಷ್ಟದರ್ಶನ ಹಾಗೂ ಉಪಲಬ್ಧಿಗಳು ಇದರ ಉದ್ದೇಶ. ಇಷ್ಟಮಂತ್ರವನ್ನು ಜಪಿಸಿ ನಿನ್ನ ಜೀವನ ಉನ್ನತವಾಗಿದೆ, ಆದರೆ ನಿನಗಿನ್ನೂ ಉಪಲಬ್ಧಿಯಾಗಿಲ್ಲ. ಸಂನ್ಯಾಸ ಗ್ರಹಣಕ್ಕೆ ಬೇಕಾಗಿರುವುದೆಂದರೆ ಆಂತರಿಕತೆ ಹಾಗು ತೀವ್ರ ವೈರಾಗ್ಯ. ಮನಸ್ಸು ಉಚ್ಚಸ್ತರದಲ್ಲಿದ್ದಾಗ ಅದ್ವೈತ ತತ್ತ್ವ - ಮಹಾವಾಕ್ಯ ಅಥವಾ ಸ್ವರೂಪ ಧ್ಯಾನವನ್ನು ಮಾಡು; ಮನಸ್ಸು ಕೆಳಗಿನ ಸ್ತರದಲ್ಲಿದ್ದಾಗ, ಅಂದರೆ ದ್ವೈತ ಜಗತ್ತಿನಲ್ಲಿದ್ದಾಗ ಇಷ್ಟಮಂತ್ರ, ಇಷ್ಟಧ್ಯಾನ ಇವನ್ನು ಅಭ್ಯಾಸ ಮಾಡು.''

ನೋಡು, ಉಪಲಬ್ಧಿಯಾದರೆ 'ದ್ವೈತ-ಅದ್ವೈತಗಳಲ್ಲಿ ಯಾವುದು ಸರಿ?' ಎಂಬ ಸಂದೇಹವಿರುವುದಿಲ್ಲ. ಆಗ ಮನಸ್ಸಿನ ವೃತ್ತಿಯು ಇವುಗಳಲ್ಲಿ ಒಂದರ ಮೇಲೆ ಸ್ಥಿರವಾಗುವುದು. ಸಂನ್ಯಾಸಿಗಳು ವೇದಾಂತ ವಿಚಾರವನ್ನು ಮಾಡುವುದೇ ಉಚಿತ. ದ್ವೈತದ ಬಗ್ಗೆ ಉದಾಸೀನರಾಗಿರುವುದನ್ನು ನಾನು ಉತ್ತರಾಖಂಡದ ಸಂನ್ಯಾಸಿಗಳಲ್ಲಿ ಕಂಡಿರುವೆ. ಆದರೆ ಈ ಭಾವವು ಠಾಕೂರರ ಶಿಷ್ಯರಲ್ಲಿ ಕಂಡುಬರುವುದಿಲ್ಲ.

**ಭಾವಾದ್ವೈತಂ ಸದಾ ಕುರ್ಯಾತ್ ಕ್ರಿಯಾದ್ವೈತಂ ನ ಕರ್ಹಿಚಿತ್ ।**
**ಅದ್ವೈತಂ ತ್ರಿಷು ಲೋಕೇಷು ನಾದ್ವೈತಂ ಗುರುಣಾ ಸಹ ॥**

ಎಂದು ಶಂಕರಾಚಾರ್ಯರು ಹೇಳುತ್ತಾರೆ. 'ಸದಾ ಅದ್ವೈತ ಭಾವವನ್ನು ಅವಲಂಬಿಸು; ಕ್ರಿಯೆಯಲ್ಲಿ ಎಂದಿಗೂ ಅದ್ವೈತ ಭಾವವನ್ನವಲಂಬಿಸಬೇಡ. ಕ್ರಿಯೆಗಳಲ್ಲಿ ಅದ್ವೈತವನ್ನವಲಂಬಿಸಿದರೆ ಅನುಷ್ಠಾನಗಳನ್ನು ನಡೆಸಲಾಗದು. ಮೂರು ಲೋಕಗಳಲ್ಲಿ ಅದ್ವೈತಭಾವವಿರಲಿ, ಆದರೆ ಗುರುವಿನೊಡನೆ ಅದ್ವೈತ ಭಾವ ಸಲ್ಲದು. ಗುರು ಮತ್ತು ಶಿಷ್ಯರು ಐಕ್ಯವಾದರೆ ಜ್ಞಾನಲಾಭ ಸಾಧ್ಯವಿಲ್ಲ.'

ರಾಜಾ ಮಹಾರಾಜರು ನಮಗೆ ದ್ವೈತಾತ್ಮಕ ಉಪದೇಶವನ್ನೆ ನೀಡುತ್ತಿದ್ದರು. ಇಷ್ಟದೇವರಲ್ಲಿ ಅನುರಾಗ ಹಾಗೂ ಪ್ರೇಮ ಭಕ್ತಿಗಳು ಮನಸ್ಸನ್ನು ಅದ್ವೈತದೆಡೆಗೆ ಕರೆದೊಯ್ಯುತ್ತವೆ. ಇಷ್ಟಮಂತ್ರವನ್ನು ಜಪಿಸುವಾಗ ಇಷ್ಟದೇವತೆಯ ರೂಪ ಹಾಗೂ ಗುಣಚಿಂತನೆಯನ್ನು ಮಾಡಲು ಅವರು ಹೇಳುತ್ತಿದ್ದರು. ನಮ್ಮ ಸಾಧನೆಯ ಉನ್ನತಿಯು ನಿತ್ಯನಿಯಮಿತ ಅಭ್ಯಾಸದ ಮೇಲೆ ಅವಲಂಬಿತವಾಗಿದೆ.

ಅಧ್ಯಾತ್ಮ ಜೀವನದಲ್ಲಿ ಆಸಕ್ತಿಯುಂಟಾಗುವುದು ಹೇಗೆ? -ಎಂಬ ಪ್ರಶ್ನೆ ಏಳುತ್ತದೆ. ಅದು ನಮ್ಮ ಅನುಭೂತಿಯನ್ನು ಅವಲಂಬಿಸಿಕೊಂಡಿದೆ. ಅನುಭೂತಿಯುಂಟಾಗುವುದು ವ್ಯಾಕುಲತೆಯಿಂದ - ಭಾವ, ಭಕ್ತಿಗಳ ಮೂಲಕ. ಇದಕ್ಕೆ ಅವಶ್ಯವಾಗಿ ಬೇಕಾಗಿರುವುದು ವಿವೇಕ-ವೈರಾಗ್ಯಗಳು. ನೋಡು, 'ಅಭ್ಯಾಸ ವೈರಾಗ್ಯಾಭ್ಯಾಂ ತನ್ನಿರೋಧಃ' ಎಂದು ಶಾಸ್ತ್ರಗಳು ಹೇಳುತ್ತವೆ. ಇಷ್ಟದೇವತೆಯ ನಾಮ-ರೂಪಗಳನ್ನು ಭಾವಿಸುತ್ತ ಸಾಧನೆ-ಭಜನೆಗಳನ್ನು ಮಾಡುತ್ತಿದ್ದರೆ ಕ್ರಮೇಣವಾಗಿ ಅದರಲ್ಲಿ ಆಸಕ್ತಿಯುಂಟಾಗುತ್ತದೆ; ಆಂತರ್ಯದಲ್ಲಿ ಆನಂದದ ಅನುಭವವಾಗುತ್ತದೆ. ನಿನ್ನ ಮನಸ್ಸು ಸಾಧನೆ-ಭಜನೆಗಳಲ್ಲಿ ನಿಂತರೂ, ನಿಲ್ಲದಿದ್ದರೂ ನಿತ್ಯ ಅಭ್ಯಾಸವನ್ನು ಮಾಡುತ್ತ ಹೋಗು. ✤